**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು-ಮಡಿಕೇರಿ**

**<u>ಎಸ್.ಸಿ ಸಂಖ್ಯೆಃ 68/2022</u>**

ಪ್ರಾಸಾಃ 19

ಚಾಸಾಃ**35**

ಸಾಕ್ಷಿದಾರರ ಹೆಸರು: ಪರಶಿವಮೂರ್ತಿ

ತಂದೆಯ ಹೆಸರು : ಪಿ.ಶಿವನಂದ್

ವಯಸ್ಸು : 54 ವರ್ಷ

ವೃತ್ತಿ : ಪಿ.ಐ, ಗುಂಡ್ಲುಪೇಟೆ ಪೊಲೀಸ್ ಠಾಣೆ, ಚಾಮರಾಜನಗರ ಜಿಲ್ಲೆ.

ವಾಸ : ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ.

**ಸಾಕ್ಷಿಯನ್ನು ದಿನಾಂಕ 14-11-2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

1. ನಾನು ದಿನಾಂಕ 04-06-2021 ರಿಂದ ದಿನಾಂಕ 31.08-2023 ರವರೆಗೆ ಶನಿವಾರಸಂತೆ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಇನ್ಸಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿದ್ದೆ.

2. ಈ ಪ್ರಕರಣದ ಕಡತವನ್ನು ದಿನಾಂಕ 22-04-2022 ರಂದು ಪ್ರಾಸಾ-18 ರವರಿಂದ ವಹಿಸಿಕೊಂಡು ನಾನು ತನಿಖೆಯನ್ನು ಮುಂದುವರೆಸಿರುತ್ತೇನೆ. ಕೃತ್ಯ ನಡೆದ ಸ್ಥಳವಾದ ಕೊಡ್ಲಿಪೇಟೆಯಿಂದ ಹೇಮಾವತಿ ನದಿಯ ಕಡೆಗೆ ಹೋಗುವ ಶಾಂತಪುರ ಗ್ರಾಮದಲ್ಲಿ ಇರುವ ಗೌರಮ್ಮನವರ ಕಾಫಿ ತೋಟದ ಪಕ್ಕದ ರಸ್ತೆಯ ಫುಟ್ಪಾತಿಯಲ್ಲಿ ಘಟನೆ

ಜರುಗಿದ್ದು, ಸದರಿ ಸ್ಥಳಕ್ಕೆ ಹೋಗಿರುತ್ತೇನೆ. ಆ ಬಳಿಕ ಸ್ಥಳಕ್ಕೆ ಪ್ರಾಸಾ-5 ಹಾಗೂ 6 ರವರನ್ನು ಬರಮಾಡಿಕೊಂಡು ಅವರಿಗೆ ನೋಟಿಸ್ಸು ನೀಡಿ ಪರಿಶೀಲನೆ ಮಾಡಿದಾಗ ಹಾಲೇಶ್ ರವರ ಮೃತ ದೇಹವು ಅಂಗಾತವಾಗಿ ಮಲಗಿಸಿದ್ದ ರೀತಿಯಲ್ಲಿ ಇತ್ತು. ಮೃತದೇಹದಲ್ಲಿ ಅಲ್ಲಲ್ಲಿ ಕಂದಿದ್ದ ಗಾಯಗಳು ಇದ್ದು ಹಾಗೂ ರಕ್ತ ಗಾಯಗಳು ಇದ್ದವು. ನಂತರ ಮೇಲೆ ಹೇಳಿದ ಸಾಕ್ಷಿದಾರರ ಸಮಕ್ಷಮ ಮಹಜರ್ ನ್ನು ಪ್ರಾರಂಭಿಸಿರುತ್ತೇನೆ. ಮೃತದೇಹದ ಭಾವಚಿತ್ರವನ್ನು ಚಾಸಾ-37 ರವರಿಂದ ತೆಗೆಯಲಾಯಿತು. ಆ ಸಂದರ್ಭದಲ್ಲಿ ವಿಡಿಯೋವನ್ನು ತಯಾರಿಸಿದ್ದೇನೆ. ಈಗ ನಾನು ನೋಡುತ್ತಿರುವ ಮಹಜರ್ ಆ ಸಂದರ್ಭದಲ್ಲಿ ನಾನು ತಯಾರಿಸಿದ್ದ ಮಹಜರ್ ಆಗಿದ್ದು ಅದನ್ನು ನಿಪಿ-9 ಎಂದು ಈಗಾಗಲೇ ಗುರುತಿಸಲಾಗಿದ್ದು, ಅದರನ್ನು ಸ್ವೀಕರಿಸಿದ ಬಗ್ಗೆ ಸಾಕ್ಷಿ ಸಹಿಯನ್ನು **ನಿಪಿ-9(**ಸಿ) ಎಂದು ಗುರುತಿಸಲಾಯಿತು. ನಂತರ ಮೃತದೇಹವನ್ನು ಮಡಿಕೇರಿಯ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿಕೊಡಲಾಯಿತು. ಅದೇ ದಿನ ಪ್ರಾಸಾ-5 ಹಾಗೂ ಪ್ರಾಸಾ-6 ರವ ರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ. ಅದೇ ದಿನ ಆರೋಪಿಗಳ ಪತ್ತೆಯ ಬಗ್ಗೆ ಸಿಬ್ಬಂದಿಗಳನ್ನು ನೇಮಕ ಮಾಡಿದ್ದೇನೆ.

3. ದಿನಾಂಕ 23-04-2022 ರಂದು ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಕೃತ್ಯ ಸ್ಥಳವನ್ನು ಪ್ರಾಸಾ-3 ರವರು ತೋರಿಸಿಕೊಟ್ಟಂತೆ ಪಂಚರಾದ ಚಾಸಾ-8 ಹಾಗೂ ಪ್ರಾಸಾ-7 ರವರನ್ನು ಸ್ಥಳಕ್ಕೆ ಬರಮಾಡಿಕೊಂಡು ಅವರಿಗೆ ನೋಟಿಸ್ಸು ನೀಡಿ, ಪ್ರಕರಣದ ವಿದ್ಯಮಾನವನ್ನು ತಿಳಿಸಿರುತ್ತೇನೆ. ಪ್ರಾಸಾ-

1 ರವರ ಸಮಕ್ಷಮ ಬೆಳಿಗ್ಗೆ 6.00 ಗಂಟೆಯಿಂದ 7.00 ಗಂಟೆಯವರೆಗೆ ಸ್ಥಳ ಮಹಜರ್ ನ್ನು ಮಾಡಿರುತ್ತೇನೆ. ಈಗ ನಾನು ನೋಡುತ್ತಿರುವ ಮಹಜರ್ ಆ ಸಂದರ್ಭದಲ್ಲಿ ನಾನು ತಯಾರಿಸಿದ್ದ ಮಹಜರ್ ಆಗಿದ್ದು, ಅದನ್ನು ನಿಪಿ-4 ಎಂದು ಈಗಾಗಲೇ ಗುರುತಿಸಲಾಗಿದ್ದು, ಅದರನ್ನು ಸ್ವೀಕರಿಸಿದ ಬಗ್ಗೆ ಸಾಕ್ಷಿ ಸಹಿಯನ್ನು **ನಿಪಿ**-4(ಸಿ) ಎಂದು ಗುರುತಿಸಲಾಯಿತು. ನಿಪಿ-4 ರ ಸಂದರ್ಭದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿದ್ದು, ಅದನ್ನು ನಿಪಿ-5 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು **ನಿಪಿ**-5(ಸಿ) ಎಂದು ಗುರುತಿಸಲಾಯಿತು. ನಿಪಿ-5 ರ ಸಂದರ್ಭದಲ್ಲಿ ಫೋಟೊಗಳನ್ನು ತೆಗೆದಿದ್ದು, ಅವುಗಳನ್ನು ನಿಪಿ-6 ಎಂದು ಈಗಾಗಲೇ ಗುರುತಿಸಲಾಗಿದೆ. ಆ ಬಳಿಕ ಶವಪಂಚನಾಮೆಗಾಗಿ ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ಹೋಗಿರುತ್ತೇನೆ. ಪ್ರಾಸಾ-8, ಚಾಸಾ-11 ಹಾಗೂ ಚಾಸಾ-12 ರವರನ್ನು ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ಬರಮಾಡಿ ಅವರಿಗೆ ನೋಟಿಸ್ಸು ನೀಡಿ, ಅವರ ಸಮಕ್ಷಮ ಬೆಳಿಗ್ಗೆ 9.00 ಗಂಟೆಯಿಂದ 11.00 ಗಂಟೆಯವರೆಗೆ ಮೃತ ಹಾಲೇಶ್ ರವರ ಶವಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಸಂದರ್ಭದಲ್ಲಿ ಫೋಟೋಗಳನ್ನು ತೆಗೆದಿರುತ್ತೇನೆ. ಆ ಸಮಯದಲ್ಲಿ ಚಾಸಾ-13 ರಿಂದ ಚಾಸಾ-16 ರವರ ಹೇಳಿಕೆಗಳನ್ನು ಮಾಡಿಕೊಂಡಿರುತ್ತೇನೆ. ಈಗ ನಾನು ನೋಡುತ್ತಿರುವ ಶವಪಂಚನಾಮೆ ಆ ಸಂದರ್ಭದಲ್ಲಿ ನಾನು ತಯಾರಿಸಿದ್ದ ಶವಪಂಚನಾಮೆ ಆಗಿದ್ದು, ಅದನ್ನು ನಿಪಿ-12 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು **ನಿಪಿ**-12(ಬಿ) ಎಂದು ಗುರುತಿಸಲಾಯಿತು. ನಿಪಿ-12 ರ ಸಂದರ್ಭದಲ್ಲಿ ತೆಗೆದ ಫೋಟೋಗಳನ್ನು ನಿಪಿ-13 ಎಂದು ಈಗಾಗಲೇ ಗುರುತಿಸಲಾಗಿದೆ. ಮೃತ ಶರೀರವನ್ನು ಆ

ಬಳಿಕ ಸಿಬ್ಬಂದಿಗಳ ಮೂಲಕ ಮರಣೋತ್ತರ ಪರೀಕ್ಷೆಗಾಗಿ ವೈದ್ಯಾಧಿಕಾರಿಗಳಿಗೆ ಮನವಿ ಪತ್ರದೊಂದಿಗೆ ಕಳುಹಿಸಿಕೊಟ್ಟಿರುತ್ತೇನೆ. ಆ ಬಳಿಕ ವಾಪಸ್ಸು ಠಾಣೆಗೆ ಬಂದಿರುತ್ತೇನೆ.

4. ಆರೋಪಿಯ ಪತ್ತೆಗೆ ನೇಮಿಸಿದ್ದ ಪ್ರಾಸಾ-16 ಹಾಗೂ ಚಾಸಾ-31 ರವರು ಆರೋಪಿಗಳಾದ 1 ರಿಂದ 3 ನೇ ಆರೋಪಿಗಳನ್ನು ಕೊಡ್ಲಿಪೇಟಯಲ್ಲಿ ಮಧ್ಯಾಹ್ನ 1.00 ಗಂಟೆಗೆ ವಶಕ್ಕೆ ಪಡೆದು ಮಧ್ಯಾಹ್ನ 1.30 ಕ್ಕೆ ನನ್ನ ಮುಂದೆ ವರದಿಯೊಂದಿಗೆ ಹಾಜರುಪಡಿಸಿರುತ್ತಾರೆ. ಈಗ ನಾನು ನೋಡುತ್ತಿರುವ ವರದಿ ಪ್ರಾಸಾ-16 ಹಾಗೂ ಚಾಸಾ-31 ರವರಿಂದ ಸ್ವೀಕರಿಸಿದ್ದ ವರದಿ ಆಗಿದ್ದು, ಅದನ್ನು ನಿಪಿ-28 ಎಂದು ಈಗಾಗಲೇ ಗುರುತಿಸಲಾಗಿದ್ದು, ಅದನ್ನು ಸ್ವೀಕರಿಸಿದ್ದ ಬಗ್ಗೆ ಸಾಕ್ಷಿ ಸಹಿಯನ್ನು **ನಿಪಿ-28**(ಬಿ) ಎಂದು ಗುರುತಿಸಲಾಯಿತು. ನಂತರ ಆರೋಪಿಗಳನ್ನು ವಿಚಾರಿಸಿ ಅವರ ಸ್ವ-ಇಚ್ಛಾ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. 1 ರಿಂದ 3 ನೇ ಆರೋಪಿಗಳು ತಮ್ಮ ಸ್ವ-ಇಚ್ಛಾ ಹೇಳಿಕೆಯಲ್ಲಿ ತಮ್ಮ ಜೊತೆ ಬಂದರೆ ಹಾಲೇಶ್ ನನ್ನು ಕೊಲೆ ಮಾಡಿದ ಜಾಗವಾದ ಕುಮಾರನ ಮನೆಯನ್ನು ತೋರಿಸುತ್ತೇನೆ ಹಾಗೂ ಮನೆಯಿಂದ ಹಾಲೇಶನ ಮೃತದೇಹವನ್ನು ರಸ್ತೆಗೆ ಸಾಗಿಸಿ, ಮಲಗಿಸಿದ ಸ್ಥಳವನ್ನು ಕೂಡ ತೋರಿಸುತ್ತೇನೆ ಅಲ್ಲದೆ, ತಾವು ಹಾಲೇಶ್ ರವರಿಗೆ ಹೊಡೆಯಲು ಬಳಸಿದ್ದ ಸೌದೆ ಕೋಲು ಕೂಡ ಮನೆಯಲ್ಲಿ ಇದ್ದು, ಅದನ್ನು ತೋರಿಸಿಕೊಡುತ್ತೇವೆ ಎಂದು ಪ್ರತ್ಯೇಕ ಪ್ರತ್ಯೇಕವಾಗಿ ಹೇಳಿರುತ್ತಾರೆ. 1 ನೇ ಆರೋಪಿಯ ಸದರಿ ಸ್ವ-ಇಚ್ಛಾ ಹೇಳಿಕೆಯ ಭಾಗವನ್ನು ನಿಪಿ-**32** ಎಂದು, ಅದರಲ್ಲಿ ಇರುವ ಸಾಕ್ಷಿ

ಸಹಿಯನ್ನು **ನಿಪಿ-32**(ಎ) ಎಂದು, 2 ನೇ ಆರೋಪಿಯ ಸದರಿ ಸ್ವ-ಇಚ್ಛಾ ಹೇಳಿಕೆ ಭಾಗವನ್ನು **ನಿಪಿ**-33 ಎಂದು, ಅದರಲ್ಲಿ ಇರುವ ಸಾಕ್ಷಿ ಸಹಿಯನ್ನು **ನಿಪಿ**-33(ಎ) ಎಂದು, 3 ನೇ ಆರೋಪಿಯ ಸದರಿ ಸ್ವ-ಇಚ್ಛಾ ಹೇಳಿಕೆ ಭಾಗವನ್ನು **ನಿಪಿ**-34 ಎಂದು, ಅದರಲ್ಲಿ ಇದ್ದ ಸಾಕ್ಷಿ ಸಹಿಯನ್ನು **ನಿಪಿ**-34(ಎ) ಎಂದು ಗುರುತಿಸಲಾಯಿತು. ನಂತರ ಮೂರು ಆರೋಪಿಗಳನ್ನು ದಸ್ತಗಿರಿ ಮಾಡಿ, ದಸ್ತಗಿರಿ ಕ್ರಮ ಅನುಸರಿಸಿರುತ್ತೇನೆ.

5. ನಂತರ ಆರೋಪಿಗಳ ಸ್ವ-ಇಚ್ಛಾ ಹೇಳಿಕೆಯಂತೆ ಕೃತ್ಯಕ್ಕೆ ಬಳಸಿದ್ದ ಸೌದೆ ತುಂಡನ್ನು ಅಮಾನತ್ತುಪಡಿಸಿಕೊಳ್ಳುವ ಉದ್ದೇಶದಿಂದ ಚಾಸಾ-8 ಹಾಗೂ ಪ್ರಾಸಾ-12 ರವರನ್ನು ಬರಮಾಡಿಕೊಂಡು ಅವರಿಗೆ ನೋಟಿಸ್ಸು ನೀಡಿ, ಅವರುಗಳು ಪಂಚರಾಗಿ ಸಹಕರಿಸಲು ಒಪ್ಪಿದ ನಂತರ, ಆರೋಪಿ ಕುಮಾರ, ಪಂಚರು ಹಾಗೂ ಸಿಬ್ಬಂದಿಗಳೊಂದಿಗೆ ಠಾಣೆಯಿಂದ ಮಧ್ಯಾಹ್ನ 2.30 ಗಂಟೆಗೆ ಹೊರಟು ಪ್ರಕರಣದ ಆರೋಪಿ ಕುಮಾರ್ ರವರು ಶಾಂತಪುರ ಗ್ರಾಮಕ್ಕ ಹೋಗಿ ಆರೋಪಿ ತನ್ನ ಮನೆಯನ್ನು ತೋರಿಸಿಕೊಟ್ಟಂತೆ ಅಲ್ಲಿಗೆ ಹೋಗಿ ಆರೋಪಿ ಕುಮಾರ್ ರವರ ಮನೆಯನ್ನು ಪರಿಶೀಲಿಸಲಾಗಿ ಆರೋಪಿ ಕುಮಾರ್ ತಾವು ಇದೆ ಸ್ಥಳದಲ್ಲಿ ಹಾಲೇಶ್ ರವರನ್ನು ಕೊಲೆ ಮಾಡಿರುವುದಾಗಿ ತೋರಿಸಿಕೊಟ್ಟ ಮೇರೆಗೆ ಸದರಿ ಸ್ಥಳವನ್ನು ಪರಿಶೀಲಿಸಿದಾಗ ಅದು ಮನೆಯ ಎದುರಿನ ಹಾಲ್ ಆಗಿದ್ದು, ಅದನ್ನು ಸಗಣಿಯಿಂದ ಸಾರಿಸಿದ ಹಾಸು ನೆಲ ಆಗಿದ್ದು, ಉರುಳಾಟ ಮಾಡಿ ಬಲಪ್ರಯೋಗ ಮಾಡಿದ ನಿಶಾನೆ ಇರುವುದರಿಂದ ನೆಲದಲ್ಲಿ ಮಣ್ಣು ಎದ್ದಂತ್ತಿರುವುದು ಕಂಡು ಬಂದಿರುತ್ತದೆ. ಹಾಲಿನಲ್ಲಿ

ಚಾಪೆಯನ್ನು ಪಂಚರ ಸಮಕ್ಷಮ ಪರಿಶೀಲಿಸಲಾಗಿ ಅದು ಹಸಿರು ಹಾಗೂ ಕೆಂಪು ಬಣ್ಣದ ಡಿಸೈನ್ ಇರುವ ಹಳೆ ಚಾಪೆ ಆಗಿದ್ದು, ಅದರ ಮೇಲೆ ಅಲ್ಲಲ್ಲಿ ರಕ್ತದ ಕಲೆಗಳು ಇರುವುದು ಕಂಡು ಬಂದಿರುತ್ತದೆ. ಅದೇ ಹಾಲಿನ ಗೋಡೆಯ ಪಕ್ಕ ಒಂದು ಸೌದೆ ಕೋಲು ಇದ್ದು, ಸದರಿ ಕೋಲಿನಿಂದಲೇ ಆರೋಪಿಗಳು ಹಾಲೇಶ್ ರವರಿಗೆ ಹಲ್ಲೆ ಮಾಡಿ ಕೊಲೆ ಮಾಡಿದ್ದೇವು ಎಂದು ಹಾಜರುಪಡಿಸಿದ ಮೇರೆಗೆ ಅದನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇವೆ. ಆ ಬಳಿಕ ಆರೋಪಿಯು ತಾವು ಮೃತದೇಹವನ್ನು ಸಾಗಿಸಿದ ಸ್ಥಳವನ್ನು ತೋರಿಸಿಕೊಡುವುದಾಗಿ ತಿಳಿಸಿ, ಆತನ ಮನೆಯಿಂದ 100 ಅಡಿ ದೂರದಲ್ಲಿ ಇರುವ ನಿಪಿ-9 ರ ಸ್ಥಳವನ್ನು ತೋರಿಸಿಕೊಟ್ಟಿದ್ದು, ಅದನ್ನು ಸಹ ಪರಿಶೀಲಿಸಿ ಮಹಜರ ನಲ್ಲಿ ನಮೂದಿಸಿರುತ್ತೇನೆ. ಸದರಿ ಮಹಜರ್ ನ್ನು ಮಧ್ಯಾಹ್ನ 3.00 ಗಂಟೆಯಿಂದ 4.00 ಗಂಟೆಯ ವರೆಗೆ ತಯಾರಿಸಲಾಯಿತು. ಈಗ ನಾನು ನೋಡುತ್ತಿರುವ ಮಹಜರ್ ಆ ಸಂದರ್ಭದಲ್ಲಿ ನಾನು ತಯಾರಿಸಿದ್ದ ಮಹಜರ್ ಆಗಿದ್ದು ಅದನ್ನು ನಿಪಿ-20 ಎಂದು ಈಗಾಗಲೇ ಗುರುತಿಸಲಾಗಿದ್ದು, ಅದರನ್ನು ಸ್ವೀಕರಿಸಿದ ಬಗ್ಗೆ ಸಾಕ್ಷಿ ಸಹಿಯನ್ನು **ನಿಪಿ-**20(ಬಿ) ಎಂದು ಗುರುತಿಸಲಾಯಿತು. ನಿಪಿ-20 ರ ಸಂದರ್ಭದಲ್ಲಿ ಎರಡು ನಕಾಶೆಯನ್ನು ತಯಾರಿಸಿದ್ದು, ಅದನ್ನು ನಿಪಿ-**35** ಎಂದು, ಅದರಲ್ಲಿ ಇದ್ದ ಸಾಕ್ಷಿ ಸಹಿಯನ್ನು ನಿಪಿ-**35**(ಎ) ಎಂದು ಗುರುತಿಸಲಾಯಿತು. ನಿಪಿ-20 ರ ಸಂದರ್ಭದಲ್ಲಿ ಫೋಟೊಗಳನ್ನು ತೆಗೆದಿದ್ದು, ಅವುಗಳನ್ನು ನಿಪಿ-21 ಎಂದು ಈಗಾಗಲೇ ಗುರುತಿಸಲಾಗಿದೆ.

6. ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ ಅವುಗಳನ್ನು ಈಗಾಗಲೇ ಮು.ಮಾ-3 ಹಾಗೂ ಮು.ಮಾ-4 ಎಂದು ಗುರುತಿಸಲಾಗಿದೆ. ಆ ಬಳಿಕ ಆರೋಪಿಯೊಂದಿಗೆ ಮತ್ತು ಅಮಾನತ್ತುಪಡಿಸಿಕೊಂಡ ವಸ್ತುಗಳೊಂದಿಗೆ ಠಾಣೆಗೆ ಬಂದು ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಠಾಣಾ ಮಾಲುಪಟ್ಟಿಯಲ್ಲಿ ಸೇರಿಸಿ ನ್ಯಾಯಾಲಯಕ್ಕೆ ವರದಿ ಮಾಡಿಕೊಂಡಿರುತ್ತೇನೆ.

7. ಆರೋಪಿತರು ತಾವು ಧರಿಸಿದ್ದ ಬಟ್ಟೆಗಳನ್ನೇ ಕೃತ್ಯ ನಡೆಯು ಸಂದರ್ಭದಲ್ಲಿ ಧರಿಸಿದ್ದೆವು ಎಂದು ಹೇಳಿದ ಮೇರೆಗೆ ಅವುಗಳನ್ನು ಅಮಾನತ್ತುಪಡಿಸಿಕೊಳ್ಳುವ ಸಲುವಾಗಿ ಪಂಚರಾಗಿ ಪ್ರಾಸಾ-13 ಹಾಗುಃ ಚಾಸಾ-19 ರವರನ್ನು ಠಾಣೆಗೆ ಕರೆಯಿಸಿ, ಅವರಿಗೆ ನೋಟಿಸ್ಸು ನೀಡಿ ಅವರು ಒಪ್ಪಿದ ನಂತರ ಆರೋಪಿಗಳಿಗೆ ಬದಲಿ ಬಟ್ಟೆಯ ವ್ಯವಸ್ಥೆ ಮಾಡಿ, 1 ನೇ ಆರೋಪಿ ಕುಮಾರ್ ಕೇಸರಿ ಬಣ್ಣದ ರೌಂಡ್ ನೆಕ್ ಇರುವ ಟಿ-ಶರ್ಟು ಹಾಗೂ ಸಿಮೆಂಟ್ ಕಲರ್ ನ ಪ್ಯಾಂಟು ಧರಿಸಿದ್ದು, ಟಿ-ಶರ್ಟಿನಲ್ಲಿ ಅಲ್ಲಲ್ಲಿ ರಕ್ತದ ಕಲೆಗಳು ಇರುತ್ತವೆ. 2 ನೇ ಆರೋಪಿ ಶೇಖರ ಧರಿಸಿದ್ದ ಬಟ್ಟೆಗಳನ್ನು ಪರಿಶೀಲಿಸಲಾಗಿ ತುಂಬು ತೋಳಿನ ಗೆರೆಗಳು ಇರುವ ಬಿಳಿ ಬಣ್ಣದ ಶರ್ಟು ಹಾಗುಃ ಕಾಫಿ ಬಣ್ಣದ ಪ್ಯಾಂಟು ಆಗಿದ್ದು, ಶರ್ಟಿನಲ್ಲಿ ಅಲ್ಲಲ್ಲಿ ರಕ್ತದ ಕಲೆಗಳು ಇದ್ದಿರುತ್ತವೆ . 3 ನೇ ಆರೋಪಿ ನಾಗರಾಜ ಧರಿಸಿದ್ದ ಬಟ್ಟೆ ಬೂದಿ ಬಣ್ಣದ ಹೂವುಗಳು ಇರುವ ಬಿಳಿ ಬಣ್ಣದ ತುಂಬು ತೋಳಿನ ಶರ್ಟು, ಮತ್ತು ಕಪ್ಪು ಬಣ್ಣದ ಪ್ಯಾಂಟು ಆಗಿದ್ದು, ಪ್ಯಾಂಟಿನಲ್ಲಿ ಅಲ್ಲಲ್ಲಿ ರಕ್ತದ ಕಲೆಗಳು ಇದ್ದಿರುತ್ತವೆ. ಸದರಿ ಬಟ್ಟೆಗಳನ್ನು ಪತ್ಯೇಕ-ಪ್ರುತ್ಯೇಕವಾಗಿ ಪ್ಯಾಕ್

ಮಾಡಿ, ಸೀಲು ಮಾಡಿ, ಅಮಾನತ್ತುಪಡಿಸಿಕೊಂಡು ನಿಪಿ-23 ರಂತೆ ಸಂಜೆ 5.00 ಗಂಟೆಯಿಂದ 5.30 ಗಂಟೆಯ ವರೆಗೆ ಮಹಜರ್ ಕ್ರಮ ಜರುಗಿಸಿರುತ್ತೇನೆ. ಮಹಜರ್ ಸಂದರ್ಭದಲ್ಲಿ ಫೋಟೋಗಳನ್ನು ತೆಗೆದಿರುತ್ತೇನೆ. ನಿಪಿ-23 ರಲ್ಲಿ ಇರುವ ಸಾಕ್ಷಿ ಸಹಿಯನ್ನು **ನಿಪಿ**-23(ಬಿ) ಎಂದು ಗುರುತಿಸಲಾಯಿತು. ನಿಪಿ-23 ರಲ್ಲಿ ತೆಗೆದ ಫೋಟೋಗಳನ್ನು ನಿಪಿ-24 ಎಂದು ಈಗಾಗಲೇ ಗುರುತಿಸಲಾಗಿದೆ. ನಾನು ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಮು.ಮಾ-5 ರಿಂದ ಮು,ಮಾ-10 ಎಂದು ಈಗಾಗಲೇ ಗುರುತಿಸಲಾಗಿದೆ. ಅಮಾನತ್ತುಪಡಿಸಿಕೊಂಡ ಸ್ವತ್ತುಗಳನ್ನು ಠಾಣಾ ಮಾಲುಪಟ್ಟಿಯಲ್ಲಿ ಸೇರಿಸಿ ನ್ಯಾಯಾಲಯಕ್ಕೆ ವರದಿ ಮಾಡಿಕೊಂಡಿರುತ್ತೇನೆ. ಅದೇ ದಿನ ಪ್ರಾಸಾ-16 ರವರಿಂದ ಕಲಂ 65(ಬಿ) ಅಡಿಯಲ್ಲಿ ದೃಢೀಕರಣ ಪತ್ರವನ್ನು, ಫೋಟೋಗಳು ಹಾಗೂ ಡಿವಿಡಿಯನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ-2 ರಿಂದ ಚಾಸಾ-5, ಚಾಸಾ-8 ರಿಂದ ಚಾಸಾ-19, ಚಾಸಾ-30 ಹಾಗೂ ಚಾಸಾ-31 ರವರ ಹೇಳಿಕೆಗಳನ್ನು ಮಾಡಿಕೊಂಡಿರುತ್ತೇನೆ. ಅದೇ ದಿನ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

8 ದಿನಾಂಕ 26-04-2022 ರಂದು ಕೃತ್ಯ ನಡೆದ ಸ್ಥಳದ ನಕಾಶೆಯನ್ನು ತಯಾರಿಸಲು ಚಾಸಾ-22 ರವರಿಗೆ ಮನವಿ ಪತ್ರ ನೀಡಿರುತ್ತೇನೆ ಹಾಗೂ 1 ನೇ ಆರೋಪಿಯ ವಾಸದ ಮನೆಯ ಜಾಗದ ದೃಢೀಕರಣ ಪತ್ರ ನೀಡುವಂತೆ ಚಾಸಾ-20 ಹಾಗೂ ಚಾಸಾ-21 ರವರಿಗೆ ಕೋರಿಕೆ ಪತ್ರವನ್ನು, ಬರೆದಿರುತ್ತೇನೆ. ಅದೇ ದಿನ ಚಾಸಾ-29 ರವರು ಮಡಿಕೇರಿ ಜಿಲ್ಲಾ

ಆಸ್ಪತ್ರೆಯಿಂದ ವೈದ್ಯರು ಸಂಗ್ರಹಿಸಿಕೊಟ್ಟ ಸೀಲು ಮೃತನ ಬಟ್ಟೆಗಳು ಹಾಗೂ ವಿಸೇರಾವನ್ನು ಕೊಟ್ಟಿರುವುದನ್ನು ತಂದು ಹಾಜರುಪಡಿಸಿದ್ದು, ಅದನ್ನು ನಿಪಿ-10 ರಂತೆ ಪ್ರಾಸಾ-7 ಹಾಗೂ ಚಾಸಾ-8 ರವರ ಸಮಕ್ಷಮ ಮಹಜರ್ ಮೂಲಕ ಅಮಾನತ್ತುಪಡಿಸಿಕೊಂಡಿರುತ್ತೇನೆ. ನಿಪಿ-10 ರಲ್ಲಿ ಇರುವ ಸಾಕ್ಷಿ ಸಹಿಯನ್ನು **ನಿಪಿ**-10(ಸಿ) ಎಂದು ಗುರುತಿಸಲಾಯಿತು. ನಿಪಿ-10 ರ ಸಂದರ್ಭದಲ್ಲಿ ಫೋಟೊಗಳನ್ನು ತೆಗೆದಿದ್ದು ಅವುಗಳನ್ನು ನಿಪಿ-11 ಎಂದು ಈಗಾಗಲೇ ಗುರುತಿಸಲಾಗಿದೆ. ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಠಾಣಾ ಮಾಲುಪಟ್ಟಿಯಲ್ಲಿ ಸೇರಿಸಿ ನ್ಯಾಯಾಲಯಕ್ಕೆ ವರದಿ ಮಾಡಿಕೊಂಡಿರುತ್ತೇನೆ. ಅದೇ ದಿನ ಚಾಸಾ-29 ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ.

9. ದಿನಾಂಕ 28-04-2022 ರಂದು ಪ್ರಾಸಾ-17 ರವರಿಂದ ಕಲಂ 65(ಬಿ) ಅಡಿಯಲ್ಲಿ ನಿಪಿ-30 ರಂತೆ ದೃಢೀಕರಣ ಪತ್ರ ಹಾಗೂ ಫೋಟೊಗಳನ್ನು ಪಡೆದುಕೊಂಡಿರುತ್ತೇನೆ. ನಿಪಿ-30 ರಲ್ಲಿ ಇದ್ದ ಸಾಕ್ಷಿ ಸಹಿಯನ್ನು **ನಿಪಿ-30**(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಅವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ.

10. ದಿನಾಂಕ 03-05-2022 ರಂದು ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡ ಸ್ವತ್ತುಳನ್ನು ಚಾಸಾ-28 ರವರ ಮೂಲಕ ಮೈಸೂರಿನ RFSL ಗೆ ಕಳುಹಿಸಿದ್ದು, ಅವರು ನೀಡಿದ ಸ್ವೀಕೃತಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿದ್ದೇನೆ. ಅದೇ ದಿನ ಅವರ

ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ. ಈಗ ನಾನು ನೋಡುತ್ತಿರುವ ಸ್ವೀಕೃತಿ ನಾನು ಅವರಿಂದ ಸ್ವೀಕರಿಸಿದ ಸ್ವೀಕೃತಿಯನ್ನು **ನಿಪಿ**-36 ಎಂದು, ಅದನ್ನು ಸ್ವೀಕರಿಸಿದ್ದ ಬಗ್ಗೆ ಸಾಕ್ಷಿ ಸಹಿಯನ್ನು **ನಿಪಿ**-36(ಎ) ಎಂದು ಗುರುತಿಸಲಾಯಿತು.

11. ದಿನಾಂಕ 20-05-2022 ರಂದು ಪ್ರಕರಣದ ಪ್ರತ್ಯಕ್ಷ ಸಾಕ್ಷಿಯಾದ ಚಾಸಾ-2 ರಿಂದ ಚಾಸಾ-5 ರವರ ಕಲಂ 164 ರ Cr.P.C ಯ ಹೇಳಿಕೆಯನ್ನು ಪಡೆಯಲು ಕೋರಿ ಮಾನ್ಯ ಸೋಮವಾರಪೇಟೆ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿರುತ್ತೇನೆ.

12. ದಿನಾಂಕ 24-05-2022 ರಂದು ಸೋಮವಾರಪೇಟೆ ನ್ಯಾಯಾಲಯದಲ್ಲಿ ಚಾಸಾ-2 ರಿಂದ ಚಾಸಾ-5 ರವರ ಹೇಳಿಕೆಗಳನ್ನು ನ್ಯಾಯಾಲಯವು ದಾಖಲಿಸಿಕೊಂಡಿದ್ದನ್ನು ಸ್ವೀಕರಿಸಿಕೊಂಡಿರುತ್ತೇನೆ.

13. ದಿನಾಂಕ 26-05-2022 ರಂದು ಚಾಸಾ-21 ರವರಿಂದ 1 ನೇ ಆರೋಪಿಯ ಮನೆಯ ಜಾಗದ ದೃಢೀಕರಣ ಪತ್ರವನ್ನು ಸ್ವೀಕರಿಸಿರುತ್ತೇನೆ. ಈಗ ನಾನು ನೋಡುತ್ತಿರುವ ದೃಢೀಕರಣ ಪತ್ರ ನಾನು ಚಾಸಾ-21 ರವರಿಂದ ಸ್ವೀಕರಿಸಿದ ದೃಢೀಕರಣ ಪತ್ರ ಆಗಿದ್ದು, ಅದನ್ನು **ನಿಪಿ**-37 ಎಂದು ಅದನ್ನು ಸ್ವೀಕರಿಸಿದ್ದ ಬಗ್ಗೆ ಸಾಕ್ಷಿ ಸಹಿಯನ್ನು **ನಿಪಿ**-37(ಎ) ಎಂದು ಗುರುತಿಸಲಾಯಿತು.

14. ದಿನಾಂಕ 09-06-2022 ರಂದು ಚಾಸಾ-22 ರವರಿಂದ ಕೃತ್ಯ ನಡೆದ ಸ್ಥಳದ ನಕಾಶೆಯನ್ನು ನಿಪಿ-15 ರಂತೆ ಸ್ವೀಕರಿಸಿರುತ್ತೇನೆ.

15. ದಿನಾಂಕ 24-06-2022 ರಂದು 1 ನೇ ಆರೋಪಿಯ ಮನೆ ಇರುವ ಬಗ್ಗೆ ಪ್ರಾಸಾ-9 ರವರಿಂದ ನಿಪಿ-14 ರಂತೆ ದೃಢೀಕರಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ನಿಪಿ-14 ರಲ್ಲಿ ಇದ್ದ ಸಾಕ್ಷಿ ಸಹಿಯನ್ನು **ನಿಪಿ-14**(ಬಿ) ಎಂದು ಗುರುತಿಸಲಾಯಿತು ಹಾಗೂ ಚಾಸಾ-23 ರವರಿಂದ RFSL ವರದಿಯನ್ನು ಸ್ವೀಕರಿಸಿರುತ್ತೇನೆ. ಈಗ ನಾನು ನೋಡುತ್ತಿರುವ ವರದಿ ನಾನು ಸ್ವೀಕರಿಸಿದ ವರದಿ ಆಗಿದ್ದು, ಅದನ್ನು **ನಿಪಿ**-38 ಎಂದು, ಅದನ್ನು ಸ್ವೀಕರಿಸಿದ್ದ ಬಗ್ಗೆ ಸಾಕ್ಷಿ ಸಹಿಯನ್ನು **ನಿಪಿ**-38(ಎ) ಎಂದು ಗುರುತಿಸಲಾಯಿತು.

16. ದಿನಾಂಕ 28-06-2022 ರಂದು ಅಮಾನತ್ತುಪಡಿಸಿಕೊಂಡ ಸೌದೆ ಕೋಲು ವೈದ್ಯರ ಮುಂದೆ ಹಾಜರುಪಡಿಸುವ ಸಲುವಾಗಿ ನ್ಯಾಯಾಲಯದ ಅನುಮತಿ ಪಡೆಯಲು ಕೋರಿರುತ್ತೇನೆ.

17. ದಿನಾಂಕ 29-06-2022 ರಂದು ನ್ಯಾಯಾಲಯದ ಅನುಮತಿಯಂತೆ ಸದರಿ ಕೋಲನ್ನು ಪ್ರಾಸಾ-11 ರವರಿಗೆ ಅಭಿಪ್ರಾಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ ಹಾಗೂ FSL ವರದಿಯನ್ನು ಅಂತಿಮ ವರದಿಯನ್ನು ನೀಡುವಂತೆ ಕೋರಿರುತ್ತೇನೆ.

18. ದಿನಾಂಕ 04-07-2022 ರಂದು ಪ್ರಾಸಾ-11 ರವರಿಂದ ಕೃತ್ಯಕ್ಕೆ ಬಳಸಿದ್ದ ಆಯುಧದ ಬಗ್ಗೆ ಅಂತಿಮ ಅಭಿಪ್ರಾಯವನ್ನು ಹಾಗೂ

ಮರಣೋತ್ತರ ಶವಪರೀಕ್ಷೆಯ ಅಂತಿಮ ಅಭಿಪ್ರಾಯವನ್ನು ನಿಪಿ-17 ಹಾಗೂ ನಿಪಿ-18 ರಂತೆ ಪಡೆದುಕೊಂಡಿರುತ್ತೇನೆ. ನಿಪಿ-17 ರಲ್ಲಿ ಇರುವ ಸಾಕ್ಷಿ ಸಹಿಯನ್ನು **ನಿಪಿ**-17(ಬಿ) ಎಂದು, ಅದೇ ರೀತಿ ನಿಪಿ-18 ರಲ್ಲಿ ಇರುವ ಸಾಕ್ಷಿ ಸಹಿಯನ್ನು **ನಿಪಿ**-18(ಬಿ) ಎಂದು ಗುರುತಿಸಲಾಯಿತು.

19. ದಿನಾಂಕ 08-07-2022 ರಂದು ಪ್ರಾಸಾ-1 ರವರ ಮರು ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ತನಿಖೆ ಪೂರೈಸಿ ಆರೋಪಿ ವಿರುದ್ಧ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಈಗ ನಾನು ನೋಡುತ್ತಿರುವ ನಿಪಿ-2 ರ ಫೋಟೊಗಳು ನಿಪಿ-9 ರ ಸಂದರ್ಭದಲ್ಲಿ ತೆಗೆದಿರುವುದಾಗಿದೆ. ಅದೇ ರೀತಿ ತನಿಖಾ ಸಂದರ್ಭದಲ್ಲಿ ತಯಾರಿಸಿದ್ದ ವಿಡಿಯೋಗಳನ್ನು ನೋಡಿದರೆ ಗುರುತಿಸುತ್ತೇನೆ.

**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ನಿಪಿ-22 ಮತ್ತು ನಿಪಿ-25 ರ DVD ನ್ನು ಪ್ರದರ್ಶಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.**

20. ಸಾಕ್ಷಿ ನಿಪಿ-22 ಹಾಗೂ ನಿಪಿ-25 ರಲ್ಲಿ ಇರುವ ವಿಡಿಯೋ ಹಾಗೂ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. 3 ನೇ ಆರೋಪಿ ಈ ದಿನ ನ್ಯಾಯಾಲಯದಲ್ಲಿ ಉಪಸ್ಥಿತರು ಇದ್ದು, ಸಾಕ್ಷಿ ಅವರನ್ನು ಗುರುತಿಸಿರುತ್ತಾರೆ.

**<u>ಪಾಟೀಸವಾಲು- ಆರೋಪಿತರ ಪರವಾಗಿ ಶ್ರೀ ಬಿ.ಡಿ.ಕೆ. ವಕೀಲರಿಂದಃ</u>**

21. ನನ್ನ ಪ್ರಕಾರ ಕೃತ್ಯ ಸ್ಥಳ ಆರೋಪಿ ಕುಮಾರ್ ಅವರ ಮನೆ. ದಿನಾಂಕ 22-04-2022 ರಂದು ಸಂಜೆ 6.30 ಗಂಟೆಯ ಸಮಯಕ್ಕೆ

ನಾನು ಕೊಡ್ಲಿಪೇಟೆಯ ಶಾಂತಪುರ ಗ್ರಾಮದ ಹೇಮಾವತಿ ನದಿಗೆ ಹೋಗುವ ರಸ್ತೆಯ ಗೌರಮ್ಮನವರ ಕಾಫಿ ತೋಟದ ರಸ್ತೆಯ ಫುಟ್ ಪಾತ್ ಗೆ ಹೋಗಿದ್ದೆ. ನಾನು ಅಲ್ಲಿಗೆ ಹೋಗಿದ್ದಾಗ ಒಟ್ಟು 3 ಜನ ಇದ್ದರು. ದಿನಾಂಕ 22-04-2022 ರಂದು ನಾನು ಕೃತ್ಯ ಸ್ಥಳಕ್ಕೆ ಹೋಗಿಲ್ಲ. ನಾನು ಹೋದ ಸ್ಥಳದಿಂದ ಕೃತ್ಯ ಸ್ಥಳಕ್ಕೆ 100 ಅಡಿ ಇದ್ದು , ಅದು ನಾನು ಹೋದ ಸ್ಥಳದಿಂದ ಕಾಣುತ್ತದೆ. ಕೃತ್ಯ ಸ್ಥಳದಿಂದ ನೋಡಿದರೆ ಮುಖ್ಯ ರಸ್ತೆ ಕಾಣುತ್ತದೆ. ಫುಟ್ ಪಾತ್ ರಸ್ತೆಯಿಂದ ನೋಡಿದರೆ ಗೌರಮ್ಮನವರ ಮನೆ ಕಾಣುತ್ತದೆ ಅದು ಅಲ್ಲಿಂದ ಸುಮಾರು 50 ಅಡಿ ದೂರ ಇದೆ. 6.30 ಗಂಟೆಯಿಂದ 7.30 ಗಂಟೆ ವರೆಗೆ ನಮ್ಮ 3 ಜನರನ್ನು ಬಿಟ್ಟರೆ ಬೇರೆ ಯಾರು ಬಂದಿರಲಿಲ್ಲ. ಆ ದಿನ ಪ್ರಾಸಾ-1 ಅಲ್ಲಿಗೆ ಬಂದಿರಲಿಲ್ಲ. ಆ ದಿನ ನನ್ನ ಜೊತೆ ಸಿಬ್ಬಂಧಿಗಳು ಕೂಡ ಇದ್ದರು. ನಾನು ಆ ದಿನ ಆರೋಪಿ ಕುಮಾರ್ ಅವರ ಮನೆಗೆ ಹೋಗಿರಲಿಲ್ಲ. ಕುಮಾರ್ ಅವರ ಸ್ವ-ಇಚ್ಛಾ ಹೇಳಿಕೆ ಪಡೆದುಕೊಳ್ಳುವ ವರೆಗೂ ಕೃತ್ಯ ಸ್ಥಳ ಯಾವುದು ಎಂದು ನನಗೆ ಗೊತ್ತಾಗಿರಲಿಲ್ಲ. ದಿನಾಂಕ 23-04-2022 ರಂದು ಬೆಳಗ್ಗೆ 6.00 ಗಂಟೆಗೆ ಮಾಡಿದ ಮಹಜರ್ ಕೃತ್ಯ ಸ್ಥಳ ಗೌರಮ್ಮನವರಿಗೆ ಸೇರಿದ ಕಾಫಿ ತೋಟದ ಪಕ್ಕದಲ್ಲಿರುವ ಸಾರ್ವಜನಿಕರ ರಸ್ತೆಯ ಬದಿಯಲ್ಲಿರುವ ಫುಟ್ ಪಾತ್. ನನ್ನ ಪ್ರಕಾರ ಈ ಪ್ರಕರಣದಲ್ಲಿ ಆರೋಪಿ ಕುಮಾರನ ಮನೆಯೇ ಕೃತ್ಯ ಸ್ಥಳ. ನನ್ನ ಪ್ರಕಾರ ನಿಪಿ-4 ರಲ್ಲಿ ಸೂಚಿಸಿದ ಸ್ಥಳ ಕೃತ್ಯ ಸ್ಥಳ ಅಲ್ಲ. ದಿನಾಂಕ 23-04-2022 ರಂದು ನಿಪಿ-4 ರಂತೆ ಮಾಡಿದ ಮಹಜರ್ ಆರೋಪಿಗಳು ದಸ್ತಗಿರಿ ಆಗುವ ಮೊದಲೆ ಮಾಡಿದ ಮಹಜರ್ ಎಂದರೆ ಸರಿ. ನಿಪಿ-4 ಮಾಡುವ ಸಂದರ್ಭದಲ್ಲಿ ಆರೋಪಿ ಯಾರು ಎಂದು ನನಗೆ

ಗೊತ್ತಿರಲಿಲ್ಲ ಎಂದರೆ ಸಾಕ್ಷಿ ಪ್ರಾಸಾ-1 ರವರ ದೂರಿನ ಆಧಾರದಲ್ಲಿ ನನಗೆ ಗೊತ್ತಾಗಿತ್ತು ಎಂದು ನುಡಿಯುತ್ತಾರೆ. ನಿಪಿ-4 ರ ಮಹಜರ್ ನ ಸ್ಥಳವನ್ನು ನನಗೆ ಚಾಸಾ-2 ಚಂದ್ರಶೇಖರ್ ತೋರಿಸಿದ್ದರು.

22. ದಿನಾಂಕ 22-04-2022 ರಂದು ಸಂಜೆ 6.30 ಗಂಟೆಯ ಸಮಯಕ್ಕೆ ನಾನು ಮೊದಲಬಾರಿ ನಿಪಿ-4 ರಲ್ಲಿ ಉಲ್ಲೇಖಿಸಿದ ಸ್ಥಳಕ್ಕೆ ಹೋದ ಸಂದರ್ಭದಲ್ಲಿ ಚಂದ್ರಶೇಖರ್ ರವರು ಇದ್ದಿರಲಿಲ್ಲ. ಚಾಸಾ-2 ರವರನ್ನು ನಾನು ನಿಪಿ-4 ಮಾಡುವ ಸಂದರ್ಭದಲ್ಲಿ ಬೆಳಿಗ್ಗೆ ನಾನು ಸ್ಥಳಕ್ಕೆ ಹೋದ ಸಂದರ್ಭದಲ್ಲಿ ಭೇಟಿ ಮಾಡಿದ್ದೆ.

23. ದಿನಾಂಕ 23-04-2022 ರಂದು ಪ್ರಾಸಾ-1 ಇದ್ದಿರಲಿಲ್ಲ. ದಿನಾಂಕ 23-04-2022 ರಂದು ಗೌರಮ್ಮನವರು ಇದ್ದರು. ದಿನಾಂಕ 22-04-2022 ರಂದು ಮೃತದೇಹವನ್ನು ತೆಗೆದುಕೊಂಡು ಹೋಗುವ ಸಂದರ್ಭದಲ್ಲಿ ಮಹಜರ್ ತಯಾರಿಸಿದ್ದೇವೆ. ದಿನಾಂಕ 22-04-2022 ರಂದು ನಿಪಿ-9 ರ ಮಹಜರ್ ಮಾಡುವ ಸಂದರ್ಭದಲ್ಲಿ ಚಂದ್ರಶೇಖರ್ ರವರು ಇದ್ದಿರಲಿಲ್ಲ. ನಿಪಿ-4 ಕ್ಕನ್ನು ಮಾಡುವ ಸಂದರ್ಭದಲ್ಲಿ ಪಂಚರು, ಚಾಸಾ-2 ಮತ್ತು ನಮ್ಮ ಸಿಬ್ಬಂದಿಗಳು ಇದ್ದರು.

24. 1 ಮತ್ತು 2ನೇ ಆರೋಪಿಯ ಆತ್ಮೀಯ ಸ್ನೇಹಿತ ನಾಗರಾಜು ಎಂದರೆ ನನಗೆ ಗೊತ್ತಿಲ್ಲ. ಹಾಲೇಶ್ ರವರ ತೋಟಕ್ಕೆ 1 ಮತ್ತು 2ನೇ ಆರೋಪಿ ಕೆಲಸಕ್ಕೆ ಹೋಗುತಿದ್ದ ಬಗ್ಗೆ ನಾನು ಬೇರೆ ಸಾಕ್ಷಿಗಳನ್ನು ವಿಚಾರಣೆ ಮಾಡಿಲ್ಲ. ಹಾಲೇಶ್ ರವರು ಅವರ ಮನೆಯಿಂದ ದಿನಾಂಕ 22-04-2022 ರಂದು ಹೋಗಿದ್ದಾರೆ ಎಂದು ನನಗೆ ತಿಳಿದು ಬಂದಿತ್ತು

ಆದರೆ, ಸಮಯ ಗೊತ್ತಿಲ್ಲ. ಪ್ರಾಸಾ-1 ತನ್ನ ದೂರಿನಲ್ಲಿ ಹಾಲೇಶ್ ರವರು 1 ರಿಂದ 3 ನೇ ಆರೋಪಿಗಳು ಕೆಲಸಕ್ಕೆ ಬರಲಿಲ್ಲ ಎಂದು ಅವರ ಮನೆಗೆ ಕರೆಯಲು ಹೋಗಿದ್ದರು ಎಂದು ತಿಳಿಸಿದ್ದರು. ದಿನಾಂಕ 22-04-2022 ರಂದು ಹಾಲೇಶ್ ರವರು 1 ರಿಂದ 3 ನೇ ಆರೋಪಿಗಳ ಮನೆಯ ಬಳಿ ಕಂಡು ಬಂದದ್ದು ನನ್ನ ತನಿಖೆಯಲ್ಲಿ ಕಂಡು ಬಂದಿಲ್ಲ.

25. ದಿನಾಂಕ 23-04-2022 ರಂದು ನಿಪಿ-20 ರ ಮಹಜರ್ ನ್ನು 1 ನೇ ಆರೋಪಿಯ ಮನೆಯಲ್ಲಿ 3.00 ಗಂಟೆಯಿಂದ 4.00 ಗಂಟೆಯ ವರೆಗೆ ಮಾಡಲಾಯಿತು. ದಿನಾಂಕ 23-04-2022 ರಂದು ಬೆಳಿಗ್ಗೆ 11.00 ಗಂಟೆಗೆ ಜಿಲ್ಲಾ ಆಸ್ಪತ್ರೆಯಿಂದ ಹೊರಟು ಠಾಣೆಗೆ ತಲುಪಿದಾಗ ಸುಮಾರು ಒಂದು ಗಂಟೆ ಆಗಿರಬಹುದು. ಅದೇ ದಿನ ಮಧ್ಯಾಹ್ನ 2.30 ಗಂಟೆಗೆ 1 ನೇ ಆರೋಪಿಯ ಜೊತೆ ಪಂಚರನ್ನು ಸೇರಿಕೊಂಡು ಶಾಂತಪುರಕ್ಕೆ ಹೋದೆ. 1 ನೇ ಆರೋಪಿಯ ಸ್ವ-ಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡು ನಾನು ಆ ಬಳಿಕ ಶಾಂತಪುರಕ್ಕೆ ಹೋಗಿದ್ದೆ. ದಿನಾಂಕ 22-04-2022 ರಂದು ನನಗೆ 1 ನೇ ಆರೋಪಿಯ ಮನೆಯ ಬಗ್ಗೆ ಗೊತ್ತಿರಲಿಲ್ಲ.

26. 1 ನೇ ಆರೋಪಿಯ ಮನೆಯಲ್ಲಿ ಯಾರು ಯಾರು ವಾಸವಾಗಿದ್ದರು ಎಂದು ತನಿಖೆ ಸಂದರ್ಭದಲ್ಲಿ ಕಂಡು ಬಂದಿರಲಿಲ್ಲ. 1 ನೇ ಆರೋಪಿ ನನ್ನ ಎದುರು ಯಾವುದೇ ಸ್ವ-ಇಚ್ಛಾ ಹೇಳಿಕೆಯನ್ನು ನೀಡಿಲ್ಲ ಮತ್ತು ವಿಡಿಯೋ ಮಾಡುವ ಉದ್ದೇಶದಿಂದ ಆ ರೀತಿಯಾಗಿ 1 ನೇ ಆರೋಪಿ ತನ್ನ ಮನೆಯ ಒಳಗೆ ಹೋಗಿ ಜಾಗವನ್ನು ತೋರಿಸಿ, ದೊಣ್ಣೆ ತೋರಿಸಿ ಮಹಜರ್ ಮಾಡಿರುವುದು 1 ನೇ ಆರೋಪಿಗೆ ನಾನು ಹೇಳಿ ಮಾಡಿಸಿದ್ದು

ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಮಾಡಿದ ಮಹಜರ್ ಹಾಗೂ ವಿಡಿಯೋಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಸಾಕ್ಷಿದಾರರ ಹೇಳಿಕೆಗಳು ಮತ್ತು ಅವರ ಮುಂದದುವರೆದ ಹೇಳಿಕೆಗಳನ್ನು ನಾನು ಮಾಡಿಕೊಂಡಿದ್ದೇನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ-4 ಹಾಗೂ ನಿಪಿ-20 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

27. 3 ನೇ ಆರೋಪಿ ಯಾವುದೇ ವಿಧದಲ್ಲೂ ಸ್ವ-ಇಚ್ಛಾ ಹೇಳಿಕೆ ನೀಡಿಲ್ಲ, ಮತ್ತು 1 ರಿಂದ 3 ನೇ ಆರೋಪಿಗಳು ನನ್ನ ಎದುರು ಪ್ರತ್ಯೇಕ-ಪ್ರತ್ಯೇಕವಾಗಿ ಸ್ವ-ಇಚ್ಛಾ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಗೌರಮ್ಮ, ಚಂದ್ರಶೇಖರ್ ರವರು ಪ್ರತ್ಯಕ್ಷ ಸಾಕ್ಷಿಗಳು ಎಂದು ನಾನು ದೋಷಾರೋಪಣಾ ಪತ್ರದಲ್ಲಿ ತೋರಿಸಿರುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ಸಿಬ್ಬಂದಿಗಳು ನೀಡಿದ ಕಲಂ 65(ಬಿ) ದೃಢೀಕರಣ ಪತ್ರ ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿರುವುದು ಎಂದರೆ ಸರಿಯಲ್ಲ. ಆರೋಪಿಗಳು ಈ ಪ್ರಕರಣದಲ್ಲಿ ಧರಿಸಿದ್ದಾರೆ ಎಂದು ಹೇಳಲಾಗುವ ಬಟ್ಟೆಗಳನ್ನು ಬಿಚ್ಚಿ ಹಾಜರುಪಡಿಸಿದ್ದಾರೆ ಎನ್ನುವ ವಿಚಾರ ಸಹ ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ ವಿಚಾರ ಎಂದರೆ ಸರಿಯಲ್ಲ.

28. ನನ್ನ ತನಿಖೆಯಲ್ಲಿ ಹಾಲೇಶ ಮದ್ಯಪಾನ ಮಾಡುತಿದ್ದ ವ್ಯಕ್ತಿ ಎಂದು ನನಗೆ ಕಂಡು ಬಂದಿಲ್ಲ. FSL ವರದಿಯಲ್ಲಿ (ನಿಪಿ-26 ರಲ್ಲಿ) ಮೃತ ಹಾಲೇಶನ ದೇಹದಲ್ಲಿ ಶೇಕಡ 84.48mg/100ml ನಷ್ಟು ethyl alcohol ಕಂಡು ಬಂದಿದೆ ಎಂದರೆ ಸರಿ. ಆರೋಪಿಗಳು ಕೆಲಸಕ್ಕೆ ಹೋಗುತಿದ್ದ ತೋಟದ ಮಾಲೀಕನನ್ನು ನಾನು ತನಿಖೆ ಮಾಡಿಲ್ಲ.

29. ಆಯುಧದ ಮೇಲೆ ವೈದ್ಯರು ನೀಡಿದ ಅಭಿಪ್ರಾಯನ್ನು ಸಹ ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಗಳು ಹಾಗೂ ಸಿಬ್ಬಂದಿಗಳ ಹೇಳಿಕೆಗಳನ್ನು ಸಹ ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತನಿಖೆಯಲ್ಲಿ 3 ನೇ ಆರೋಪಿ ಯಾವುದೇ ವಿಧದಲ್ಲಿ ಈ ಕೃತ್ಯದಲ್ಲಿ ಭಾಗವಹಿಸಿಲ್ಲ ಎಂಬುದು ಕಂಡು ಬಂದಿದೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಯಾವುದೇ ಆರೋಪಾ ಸಾಭೀತಾಗದಿದ್ದರೂ ಅವರ ವಿರುದ್ಧ ಸುಳ್ಳು ದೋಷಾರೋಪಣಾ ಪತ್ರವನ್ನು ನಾನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

30. ಮೃತ ಹಾಲೇಶ ಆರೋಪಿಗಳಿಗೂ ಕೆಲಸಕ್ಕೆ ಬರಲು ಮುಂಗಡ ಹಣ ನೀಡಿರುವುದು, ಆರೋಪಿಗಳು ಕೆಲಸಕ್ಕೆ ಹೋಗದಿರುವುದು, ಅವರನ್ನು ಕರೆಯಲು ಹಾಲೇಶ ಅವರ ಮನೆಗೆ ಹೋಗಿರುವುದು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ ವಿಚಾರಗಳು ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ